# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 20-10-2022

ಬಸವಕಲ್ಯಾಣ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 145/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ:19/10/2022 ರಂದು 16:00 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಬಸವಕಲ್ಯಾಣ ನಗರದ ಹುಲಸೂರ ರೋಡ ಆರ್.ಕೆ. ಹೋಟೆಲ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಕರೆದು ಅವರಿಗೆ ಒಂದು ರೂಪಾಯಿ ನೀಡಿರಿ, ಮಟ್ಕಾ ನಂಬರ ಹತ್ತಿದರೆ ಒಂದು ರೂಪಾಯಿಗೆ 90 ರೂಪಾಯಿ ಕೊಡುತ್ತೆನೆ. ಅಂತ ಹೇಳಿ ಒಬ್ಬ ಮಹಿಳೆ ಸಾರ್ವಜನಿಕರಿಂದ ಹಣ ಪಡೆದು ಅವರಿಗೆ ಮಟ್ಕಾ ಚೀಟಿ ಬರೆದು ಕೊಡುತ್ತಿದ್ದಾಳೆ ಅಂತ ಖಚೀತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ಅಲ್ಲಿ ಆರ್.ಕೆ. ಹೋಟೆಲ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ಮಹಿಳೆ ಮತ್ತು ಒಬ್ಬ ವ್ಯಕ್ತಿ ಜನರಿಗೆ ಕರೆದು ಒಂದು ರೂಪಾಯಿ ನೀಡಿರಿ, ಮಟ್ಕಾ ನಂಬರ ಹತ್ತಿದರೆ ಒಂದು ರೂಪಾಯಿಗೆ 90 ರೂಪಾಯಿ ಕೊಡುತ್ತೆನೆ ಅಂತ ಹೇಳಿ ಸಾರ್ವಜನಿಕರಿಂದ ಹಣ ಪಡೆದು ಅವರಿಗೆ ಮಟ್ಕಾ ಚೀಟಿ ಬರೆದು ಕೊಡುತ್ತಿರುವುದನ್ನು ಖಚಿತ ಪಡಿಸಿಕೊಂಡು ದಾಳಿ ಮಾಡಿ ಹಿಡಿದ ಮಹಿಳೆ ಹೆಸರು ವಿಳಾಸ ವಿಚಾರಿಸಲು ಅವಳು ತನ್ನ ಹೆಸರು ಶ್ರೀಮತಿ ಕವಿತಾ ಗಂಡ ರಾಜೇಶ ಸಟಕ್, ವಯಸ್ಸು 40 ವರ್ಷ, ಜಾತಿ: ಮಾಂಗರವಾಡಿ, ಉ: ಕೂಲಿ ಕೆಲಸ ಸಾ:ಈಶ್ವರ ನಗರ ತಾ: ಬಸವಕಲ್ಯಾಣ ಅಂತ ಹೇಳಿದನು, ಅವಳ ಹತ್ತಿರವಿದ್ದ 2030/-ರೂಪಾಯಿ ನಗದು ಹಣ ಮತ್ತು ಒಂದು ಬಾಲ ಪೇನ್ನ ಹಾಗೂ ಒಂದು ಮಟ್ಕಾ ನಂಬರ ಬರೆದಿರುವ ಚೀಟಿ ದೋರಕಿದ್ದು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಹೋಕ್ರಾಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 73/2022 ಕಲಂ 32,34 ಕೆ.ಇ. ಕಾಯ್ದೆ & 273 ಐಪಿಸಿ :-

ದಿನಾಂಕ: 19/10/2022 ರಂದು ಪೋಮಾನಾಯಕ ತಾಂಡಾ ಗಂಗನಬೀಡ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಹತ್ತಿರ ರೋಡಿನ ಮೇಲೆ ಒಬ್ಬ ವ್ಯಕ್ತಿ ಐದು ಲೀಟರಿನ ಪ್ಲಾಸ್ಟಿಕ ಕ್ಯಾನಿನಲ್ಲಿ ಕಳ್ಳ ಭಟ್ಟಿ ಸರಾಯಿ ಇಟ್ಟುಕೊಂಡು ಜನರಿಗೆ ಮಾರಾಟ ಮಾಡುತ್ತಿದ್ದಾನೆಂದು 1415 ಗಂಟೆಗೆ ಖಚಿತ ಮಾಹಿತಿ ಬಂದಿದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಹತ್ತಿರ ಸಾರ್ವಜನಿಕ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ಒಂದು ಕ್ಯಾನ್ ಹಿಡಿದುಕೊಂಡು ಕುಳಿತ್ತಿದ್ದು ಅವನು ಸದರಿ ಕ್ಯಾನಿನಲ್ಲಿದ್ದ ಕಳ್ಳಭಟ್ಟಿ ಸರಾಯಿ ಜನರಿಗೆ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಪಡಿಸಿಕೊಂಡು 1530 ಗಂಟೆಗೆ ಪಂಚರ ಸಮಕ್ಷಮ ಪೊಲೀಸರು ಆ ವ್ಯಕ್ತಿಯ ಮೇಲೆ ದಾಳಿ ಮಾಡಿ ಅವನನ್ನು ಹಿಡಿದುಕೊಂಡಿದ್ದು, ಅವನಿಗೆ ವಿಚಾರಿಸಲು ಅವನು ತನ್ನ ಹೆಸರು ಬಾಲಾಜಿ ತಂದೆ ತುಳಸಿರಾಮ ರಾಠೋಡ ವಯ: 30 ವರ್ಷ ಜಾತಿ: ಎಸ್.ಸಿ ಲಮಾಣಿ ಸಾ: ಪೋಮಾನಾಯಕ ತಾಂಡಾ ಗಂಗನಬೀಡ ಅಂತ ತಿಳಿಸಿದನು. ಸದರಿ ವ್ಯಕ್ತಿಯ ವಶದಲ್ಲಿದ್ದ ಕ್ಯಾನನ್ನು ಪರಿಶೀಲಿಸಿ ಈ ಕ್ಯಾನಿನಲ್ಲಿ ಏನಿದೆ ಅಂತ ವಿಚಾರಿಸಲು ಇದರಲ್ಲಿ ಕಳ್ಳ ಭಟ್ಟಿ ಸರಾಯಿ ಇದೆ ಲೀಟರಗೆ 200/-ರೂಪಾಯಿಯಂತೆ ಮಾರಾಟ ಮಾಡುತ್ತೇನೆ ಅಂತ ಹೇಳಿದನು. ಈ ಕಳ್ಳ ಭಟ್ಟಿ ಸರಾಯಿ ಮಾರಾಟ ಮಾಡಲು ಸರ್ಕಾರದಿಂದ ಯಾವುದೇ ಪರವಾನಿಗೆ ಪಡೆಯಲಾಗಿದೆಯೆ? ಅಂತ ವಿಚಾರಿಸಲು ಅವನು ತನ್ನ ಹತ್ತಿರ ಸರಾಯಿ ಮಾರಾಟ ಮಾಡಲು ಯಾವುದೇ ಪರವಾನಿಗೆ ಲೈಸನ್ಸ್ ಇಲ್ಲಾ ಅಂತ ತಿಳಿಸಿರುತ್ತಾನೆ. ಸದರಿ ವ್ಯಕ್ತಿಯ ವಶದಲ್ಲಿದ್ದ 5 ಲೀಟರಿನ ಕ್ಯಾನಿನಲ್ಲಿ ಪರಿಶೀಲಿಸಲು ಇದರಲ್ಲಿ ಅಂದಾಜು 4 ಲೀಟರದಷ್ಟು 800/-ರೂಪಾಯಿಯ ಕಳ್ಳಭಟ್ಟಿ ಸರಾಯಿ ಇದ್ದು ಅದನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.